MADAM SPEAKER :—The lists are laid :

Adjournment Motion re : alleged publice excess on the students in Hassan.

†ಶ್ರೀ ಕೋಣಂದೂರು ಲಿಂಗಪ್ಪ : (ತೀರ್ಥಹಳ್ಳಿ)--ಅಧ್ಯಕ್ಷರೇ, ನಾನು ಇಂದು ತಮ್ಮ ಕಡೆಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದು ಇಂದು ಪೇಪರುಗಳಲ್ಲಿ ಬಂದಿರುವ ಹಾಸನದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಮಾಡಿರುವ ಲಾಠಿಚಾರ್ಜು ಇತ್ಯಾದಿ ವಿಚಾರಗಳ ಬಗ್ಗೆ ವಿನಾ ಕಾರಣ ಪೋಲೀಸರು ದೌರ್ಜನ್ಯ ಇಂದು ಹಾಸನದ ವಿದ್ಯಾರ್ಥಿಗಳ ಮೇಲೆ ಆಗಿದೆ. ಇವರ ಮೇಲೆ ಅಶ್ರುವಾಯು ಪ್ರಯೋಗ ಹಾಗೂ ಲಾಠಿ ಚಾರ್ಜುಗಳನ್ನು ಮಾಡಿ ಪೋಲೀಸರು ಅವರ ದೌರ್ಜನ್ಯವನ್ನು ತೋರಿಸಿದ್ದಾರೆ. ಇದೇ ರೀತಿ ಕಳೆದ 30 ದಿನಗಳ ಹಿಂದೆ ಮಂಗಳೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಅಲ್ಲಿ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದಾಗ ಅವರ ಮೇಲೆ ಲಾಠಿ ಪ್ರಹಾರ ಮಾಡಿ ಅಶ್ರುವಾಯು ಉಪಯೋಗಿಸಿದರು. ಈ ರೀತಿ ಪೋಲೀಸರು ವಿನಾ ಕಾರಣ ಗೋಲಿಬಾರು ಅಶ್ರುವಾಯು ಹಾಗೂ ಲಾಠಿ ಚಾರ್ಜುಗಳನ್ನು ಹುಡುಗರ ಮೇಲೆ ಮಾಡುತ್ತಾ ಹೋದರೆ ಇದರ ಬಗ್ಗೆ ಸರಕಾರ ಏನೂ ಮಾಡುತ್ತಿಲ್ಲ. ಚಳುವಳಿ ಮಾಡುವವರ ಮೇಲೆ ಅವರನ್ನು ಹತ್ತಿಕ್ಕಲು ಅವರ ಮೇಲೆ ದೌರ್ಜನ್ಯ ಮಾಡಿ ಪೋಲೀಸರು ಹೊಡೆಯುತ್ತಿದ್ದಾರೆ. ಇದರ ಬಗ್ಗೆ ಸರಕಾರ ಒಂದು ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ತಮ್ಮ ಮೂಲಕ ಇದರ ಬಗ್ಗೆ ಚರ್ಚೆ ಮಾಡಲು ಒಂದು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಹೆಚ್. ಹನುಮೇಗೌಡ : (ಹಾಸನ) ಮಾನ್ಯ ಅಧ್ಯಕ್ಷರೇ, ಇಂದು ಬೆಳಗ್ಗೆ ಹತ್ತು ಗಂಟೆಗೆ ತಮ್ಮ ಕಡೆಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಇದರ ಬಗ್ಗೆ ಇಲ್ಲಿ ಹೇಳಲು ತಮ್ಮ ಅಪ್ಪಣೆ ಕೇಳುತ್ತೇನೆ ಮತ್ತು ಅದಕ್ಕೆ ತಾವು ಪರ್ಮಿಷನ್ ಕೊಡುವುದಕ್ಕೆ ಮುನ್ನ ಒಂದೆರಡು ವಿಚಾರಗಳನ್ನು ಮಾತ್ರ ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು : ನಿನ್ನೆ ಇದರ ಬಗ್ಗೆ ಸಾಕಷ್ಟು ಕಾಲ ಚರ್ಚೆಯಾಗಿದೆ ಮತ್ತು ಇದೇ ವಿಚಾರದ ಬಗ್ಗೆ ಇಲ್ಲಿ ಹೇಳಬೇಕೆಂದರೆ ಹೇಗೆ? ಮಾನ್ಯ ಮಂತ್ರಿಗಳಾದ ಶ್ರೀ ಚೆನ್ನಬಸಪ್ಪನವರು ಹಾಸನಕ್ಕೆ ಹೋಗಿ ಬಂದು ಇದರ ಬಗ್ಗೆ ಹೇಳಿಕೆ ಕೊಡುತ್ತೇನೆಂದು ತಿಳಿಸಿದ್ದಾರೆ. ತಾವು ಅದುವರೆಗೆ ಸ್ವಲ್ಪ ಸಮಾಧಾನ ದಿಂದಿರಬೇಕು.

ಶ್ರೀ ಹೆಚ್. ಎಸ್. ಸಿದ್ದಪ್ಪ : ಮಾನ್ಯ ಮಂತ್ರಿಗಳಾದ ಶ್ರೀ ಚೆನ್ನಬಸಪ್ಪ ನವರು ಹಾಸನಕ್ಕೆ ಹೋಗಿ ಬರುತ್ತೇನೆಂದು ಹೇಳಿದವರು ಇಂದು ಮಂಗಳೂರಿಗೆ ಹೋಗಿದ್ದಾರೆ.

ಅಧ್ಯಕ್ಷರು : ಹಾಗಾದರೆ ಮಂತ್ರಿಗಳು ಹಾಸನಕ್ಕೆ ಹೋಗಿಲ್ಲ ಎಂದು ಹೇಳುತ್ತೀರಾ ?

ಶ್ರೀ ಹೆಚ್. ಎಸ್. ಸಿದ್ದಪ್ಪ : ಅವರು ಹೋಗಿರಬಹುದು ಮತ್ತು ಅಲ್ಲಿಂದ ಇನ್ನು ಎಂಟು ದಿನಗಳಾದ ಮೇಲೆ ಹಿಂದಿರುಗಿ ಬರಬಹುದು. ಆಗ ಇಲ್ಲಿ ಹೇಳಿಕೆ ಕೊಟ್ಟರೆ ಅದರಿಂದೇನು ಪ್ರಯೋಜನವಾಗುತ್ತದೆ ? ಹೀಗೆ ಮಾಡಿದರೆ ಅರ್ಥವೇನು ?

ಅಧ್ಯಕ್ಷರು : ತಾವು ಹೀಗೆಲ್ಲಾ ಮಾತಾಡುತ್ತಾ ಹೋದರೆ ಹೇಗೆ ?

ಶ್ರೀ ಕೆ. ಹೆಚ್. ಹನುಮೇಗೌಡ : ವಿದ್ಯಾರ್ಥಿಗಳ ಮೇಲೆ ಅನ್ಯಾಯ ವಾಗಿರುವುದನ್ನು ಅಲ್ಲಿನ ವಿದ್ಯಾರ್ಥಿಗಳ ಮುಖಂಡರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲು ಅವರು ಹೋದಾಗ ಅಲ್ಲಿರುವ ಸಂಬಂಧಪಟ್ಟ ಯಾವ ಅಧಿಕಾರಿ ಗಳೂ ಇದಕ್ಕೆ ಗಮನ ಕೊಡಲಿಲ್ಲ. ಇದಕ್ಕಾಗಿ ಇಲ್ಲಿನ ವಿದ್ಯಾರ್ಥಿಗಳೆಲ್ಲರೂ ಒಂದು ಕಡೆ ಸೇರಿ ಅವರು ಮೀಟಿಂಗು ನಡೆಸಿ ಹಾಸನದಲ್ಲಿ ಬಂದು ಮಾಡ ಬೇಕೆಂದು ತಿಳಿಸಿ ಇದರ ಬಗ್ಗೆ ಅಲ್ಲಿನ ವಿದ್ಯಾರ್ಥಿ ಮುಖಂಡರು ಪೇಪರುಗಳಿಗೆ ಒಂದು ಸ್ಟೇಟುಮೆಂಟನ್ನೂ ಕೊಟ್ಟರು ಮತ್ತು ಇದರ ಬಗ್ಗೆ ಅಲ್ಲಿ ಬಹಳ ಗೊಂದಲ ಗಳೂ ಆದುವು ಮತ್ತು ಇಲ್ಲಿನ ವಿದ್ಯಾರ್ಥಿಗಳು ೬ನೇ ತಾರೀಖು ಹಾಸನದಲ್ಲಿ ಬಂದು ಆಚರಿಸಬೇಕೆಂದು ಇಲ್ಲಿನ ಜನಗಳಿಗೆ ಕರೆ ಇತ್ತಿದ್ದರು.

ಅಧ್ಯಕ್ಷರು : ಇವನ್ನೆಲ್ಲಾ ನಿನ್ನೆ ಹೇಳಿಯಾಗಿದೆ ಮತ್ತೆ ಅದನ್ನೇ ಹೇಳಲು ಹೋದರೆ ಹೇಗೆ ? ಇದಕ್ಕೆ ಇನ್ನೂ ನಾನು ತಮಗೆ ಅಪ್ಪಣೆ ಕೊಟ್ಟಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ :—ತಾವು ಇದಕ್ಕೆ ಪರ್ಮಿಷನ್ ಕೊಡ ಬೇಕೆಂದು ಮೊದಲೇ ತಮ್ಮಲ್ಲಿ ಅರಿಕೆ ಮಾಡಿದ್ದೇನೆ. ಇದಕ್ಕೆ ಮುಂಚೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ಇಲ್ಲಿ ಹೇಳಬೇಕಾಗಿ ಬಂತು. ನಿನ್ನೆ ಬೆಳಗ್ಗೆ ಹತ್ತು ಗಂಟೆಯ ವೇಳೆಯಲ್ಲಿ ಅಲ್ಲಿದ್ದ ಕೆಲವು ವಿದ್ಯಾರ್ಥಿಗಳ ಮುಖಂಡರು ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿ ಅವರ ಮನವಿಯನ್ನು ಕೊಡ ಬೇಕೆಂದು ಇದ್ದರಂತೆ. ಆ ವೇಳೆಯಲ್ಲಿ ಅವರನ್ನು ಪೋಲೀಸರು ಎಳೆದುಕೊಂಡು ಹೋದರಂತೆ. ಇದರ ಬಗ್ಗೆ ನನಗೆ ಇಂದು ಟೆಲಿಗ್ರಾಂ ಕೂಡ ಬಂದಿದೆ.

ಅಧ್ಯಕ್ಷರು :—ತಾವು ಹೀಗೆ 'ಅಂತೆ ಕಂತೆ' ಎಂದು ಹೇಳಿದರೆ ಸರಿಯಾಗಿರುತ್ತದೆಯೇ ? ಹೇಳುವ ವಿಚಾರಗಳನ್ನು ಸರಿಯಾಗಿ ಮತ್ತು ಸ್ಪಷ್ಟವಾಗಿ ತಿಳಿಸಬೇಕು. ತಾವು ಅಲ್ಲಿಗೆ ಹೋಗಿ ನೋಡಿಲ್ಲ ಇಲ್ಲಿ ಹೀಗೆ ಹೇಳುತ್ತಾ ಹೋದರೆ ಹೇಗೆ ?

ಶ್ರೀ ಕೆ. ಹೆಚ್. ಹನುಮೇಗೌಡ :—ನಾನು ಹೇಳುತ್ತಿರುವುದು ಜಿಲ್ಲಾಧಿಕಾರಿಗಳ ಕಚೇರಿಗೆ ಅಲ್ಲದ ಮೂರುಜನ ವಿದ್ಯಾರ್ಥಿಗಳ ಮುಖಂಡರುಗಳು ಎಂದರೆ ಶ್ರೀ ಕೃಷ್ಣೇ ಗೌಡ, ಶ್ರೀ ವೆಂಕಟರಾಮೇಗೌಡ ಮತ್ತು ಶ್ರೀ ರಂಗೇಗೌಡ ಎನ್ನುವವರು ಒಂದು ಮೆಮೊರ್ಯಾಂಡಂನ್ನು ಕೊಡಲು ಹೋಗಿದ್ದರು. ಆಗ ಅಲ್ಲಿಗೆ ಬಂದಿದ್ದ ಕೆಲವು ರಿಸರ್ವ್ ಪೋಲಿಸರುಗಳು ಒಂದು ರೀತಿಯಾದ ಅಮಲಿನಲ್ಲಿ ಬಂದಿದ್ದರು ಎಂದು ನನಗೆ ತಿಳಿದು ಬಂದಿದೆ. ಇದು ತಮಗೂ ಗೊತ್ತಿರಬಹುದು.

ಅಧ್ಯಕ್ಷರು :—ನನಗೇನೂ ಗೊತ್ತಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ :—ಈ ಕಚೇರಿ ಒಳಗೆ ಹೋದ ಮೂವರು ವಿದ್ಯಾರ್ಥಿಗಳ ಮುಖಂಡರನ್ನೂ ಈ ಪೋಲೀಸರು ಹೊರಕ್ಕೆಳೆದುಕೊಂಡು ಒಂದು ಸಿಕ್ಕಾಪಟ್ಟೆ ಹೊಡಿದಿದ್ದಾರೆ. ಇಲ್ಲಿನ ಪೋಲೀಸರಿಗೆ ಮಾನವೀಯ ದೃಷ್ಟಿಯೇ ಇಲ್ಲವೇ ? ಇವರನ್ನೆಲ್ಲಾ ಹೊರಕ್ಕೆಳೆದು ಬೂಟ್ಸು ಕಾಲುಗಳಲ್ಲಿ ಒದ್ದು ಮತ್ತು ಹೊಡೆದು ಹಿಂಸೆ ಮಾಡಿದರು. ಇಲ್ಲಿನ ಹುಡುಗರು ಪೋಲೀಸು ಸ್ಟೇಷನ್ ಬಳಿ ಪೋಲೀಸರಿಗೆ ಧಿಕ್ಕಾರ ಎಂದು ಕೂಗಿದಾಗ ಅವರ ಮೇಲೆ ಸಿಕ್ಕಾಪಟ್ಟೆ ಲಾಠಿ ಪ್ರಹಾರ ಮಾಡಿ ಹೊಡಿದಿದ್ದಾರೆ. ಇತರ ಶಾಲೆಗಳಿಗೆ ಹೋಗುವ ಸಣ್ಣ ಮಕ್ಕಳಿಗೆ ಹಾಗೂ ನೂರಾರು ಜನರಿಗೆ ಹೊಡಿದಿದ್ದಾರೆ ನನಗೆ ಇಂದು ಟ್ರಂಕ್‌ಕಾಲನಲ್ಲಿ ಮಾತಾಡಿದಾಗ ತಿಳಿದು ಬಂದಿರುವಂತೆ ಬೀದಿ ಬೀದಿಯಲ್ಲಿ ಮಕ್ಕಳನ್ನು ಹೊಡೆದು ರಕ್ತ ದಿಂದ ಕೂಡಿರುವ ಬಟ್ಟೆಗಳು ಬೀದಿ ಬೀದಿಗಳಲ್ಲಿ ಚಲ್ಲಾಡಿದ್ದಾರೆಂದು ತಿಳಿದಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ ಈ ರೀತಿ ಹತ್ತು, ಎಂಟು ಹಾಗೂ ಆರು ವರ್ಷಗಳ ಮಕ್ಕಳನ್ನು ಪೋಲೀಸರು ಸಿಕ್ಕಾಪಟ್ಟೆ ಹೊಡೆದು ಅವರ ತಲೆಯಲ್ಲಿ ರಕ್ತ ಬರುವ ಹಾಗೆ ಮಾಡಿದರೆ ಹೇಗೆ ? ಇಂತಹವರನ್ನು ಕಾಪಾಡುವುದು ಸರಕಾರದ ಕರ್ತವ್ಯವಲ್ಲವೆ ? ನಾಯಿಗಳನ್ನು ಹೊಡೆಯುವಂತೆ ಸಣ್ಣ ಹುಡುಗರನ್ನು ಪೋಲೀಸರು ಹೊಡೆಯುವುದು ನ್ಯಾಯವೇ ?

(ಶ್ರೀ ಹೆಚ್. ಎಸ್. ಸಿದ್ದಪ್ಪ ಹಾಗೂ ಬಂಗಾರಪ್ಪನವರು ಮತ್ತು ಇನ್ನಿತರರು ಎದ್ದರು. ಬೇಕಾದರೆ ಅಂತಹ ಮಕ್ಕಳನ್ನು ಈ ಸದನದ ಮುಂದೆ ತಂದು ನಿಲ್ಲಿಸುತ್ತೇವೆ ಎಂದರು.)

ಅಧ್ಯಕ್ಷರು :— ಈ ರೀತಿ ಸದಸ್ಯರು ಒಂದೇ ಸಾರಿ ಎಲ್ಲರೂ ಎದ್ದು ನಿಂತು ಹೇಳಿದರೆ ಇದು ಸರಿಯಾಗಿರುತ್ತದೆಯೇ ? ಇದನ್ನು ವರದಿಕಾರರು ಹೇಗೆ ತಾನೇ ಇಲ್ಲಿ ರಿಕಾರ್ಡು ಮಾಡಬಹುದು ? ದಯವಿಟ್ಟು ಇನ್ನು ಮುಂದೆ ಒಬ್ಬ ಸದಸ್ಯರು ಇಲ್ಲಿ ಮಾತನಾಡುವಾಗ ಅವರು ಯೀಲ್ಡ್ ಆಗದಿರುವಾಗ ಬೇರೆ ಸದಸ್ಯರು ಮಧ್ಯ ಮಧ್ಯದಲ್ಲಿ ನಿಂತು ಮಾತನಾಡಿದರೆ ಅದನ್ನು ಅಧಿಕೃತ ವರದಿಗಾರರು ರಿಕಾರ್ಡು ಮಾಡಿಕೊಳ್ಳಬಾರದು.

ಶ್ರೀ ಕೆ. ಹೆಚ್. ಹನುಮೇಗೌಡ :— ಇಲ್ಲಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಹೈಸ್ಕೂಲು ವಿದ್ಯಾರ್ಥಿಗಳೂ ಇದ್ದರು.

ಕಾನ್‌ವೆಂಟಿಗೆ ಹೋಗುತ್ತಿದ್ದ ಮಕ್ಕಳನ್ನು ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲ್ ಗಳಿಗೆ ಹೋಗುತ್ತಿದ್ದ ಮಕ್ಕಳನ್ನು ಹಿಡಿದುಕೊಂಡು ಹೊಡೆದಿದ್ದಾರೆ. 50-60 ಜನ ಇಂಥ ಮಕ್ಕಳು ಆಸ್ಪತ್ರೆಗೆ ಸೇರಿದ್ದಾರೆ. ದಾರಿಯಲ್ಲಿ ಸಿಕ್ಕಿದವರು, ಕಾಲೇಜಿನೊಳಗೆ ಇದ್ದವರು, ಅಂಗಡಿಯಲ್ಲಿದ್ದವರು, ಹೊಟೇಲ್‌ನಲ್ಲಿ ಇದ್ದವರು, ಹೀಗೆ ಯಾರು ಸಿಕ್ಕಿದರು ಅವರನ್ನೆಲ್ಲ ಬೀದಿಗೆ ಎಳೆದುಕೊಂಡು ಬಂದು ಬಯ್ದು ಹೊಡೆದಿದ್ದಾರೆ. ಹೀಗೆ ನೂರಾರು ಜನರಿಗೆ ಹೊಡೆದಿದ್ದಾರೆ. ನನಗೆ ಗೊತ್ತಾಗಿರುವಂತೆ 70 ಜನ ವಿದ್ಯಾರ್ಥಿಗಳು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರು ಮಕ್ಕಳು ಖಾಸಗಿ ನರ್ಸಿಂಗ್ ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾದ ಲಾಠಿ ಚಾರ್ಜ್ ಮಧ್ಯಾಹ್ನ ಮೂರು ಗಂಟೆಯವರೆಗೂ ನಡೆದು ನೂರಾರು ಜನರನ್ನು ಹೊಡೆದಿದ್ದಾರೆ.

ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಡುವುದಕ್ಕೆ ವಿದ್ಯಾರ್ಥಿಗಳು ಹೋದಾಗ ಅವರನ್ನು ಹೊರಗಡೆ ಎಳೆದುಕೊಂಡು ಬಂದು ವಿನಾ ಕಾರಣ ಹೊಡೆದಿದ್ದಾರೆ. ಜಿಲ್ಲಾಧಿಕಾರಿಗಳು ಆಗ ಷುಗರ್ ಫ್ಯಾಕ್ಟರಿ ಮೀಟಿಂಗಿಗೆ ಹೋಗುತ್ತಿದ್ದು ಪೋಲೀಸಿನವರನ್ನು ಕರೆದು ಹೊಡೆಯಿರಿ ಎಂದೇನಾದರೂ ಹೇಳಿರಬಹುದು.

ಅಧ್ಯಕ್ಷರು :—ಈ ಘಟನೆ ನಡೆದಾಗ ಮಾನ್ಯ ಸದಸ್ಯರು ಅಲ್ಲ ಇದ್ದರೇ ?

ಶ್ರೀ ಕೆ. ಹೆಚ್. ಹನುಮೇಗೌಡ :— ನಾನು ಈ ವಿಚಾರಗಳನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಅಧಿಕಾರಿಗಳು ಸ್ವಲ್ಪ ವಿವೇಚನೆಯಿಂದ ವರ್ತಿಸಿದ್ದರೆ ಈ ಘಟನೆ ನಡೆಯುತ್ತ ಇರಲಿಲ್ಲ ತಾವು ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಅವಕಾಶ ಕೊಡಬೇಕು ಮತ್ತು ನಡೆದಿರುವ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಈ ಘಟನೆಗೆ ಹಿನ್ನೆಲೆಯ್ಯಾಗಿ ಚರ್ಚೆ ಮಾಡಬೇಕಾದ ಕಾಲದಲ್ಲಿ, ಒಬ್ಬ ಬಾಲಕ ಪೋಲೀಸ್ ಸ್ಟೇಷನ್‌ನಲ್ಲಿ ಸತ್ತ ಫಲವಾಗಿ ಇಂಥ ಘಟನೆಯಾಗುವುದಕ್ಕೆ ಕಾರಣವಾಗಿದೆ. ಅಲ್ಲಿಂದ ಬಂದಿರತಕ್ಕ ವರ್ತಮಾನವನ್ನು ಕೇಳಿದರೆ ಬಹುಶ: ಹಾಸನದ ಇತಿಹಾಸದಲ್ಲಿ ಇಂಥ ಘಟನೆ ಯಾವತ್ತೂ ನಡೆದಿದ್ದಿಲ್ಲ. ಅಲ್ಲಿ ನಡೆದಿರುವ ಹಿಂಸಾಕಾಂಡವನ್ನು ನೋಡಿದವರು ಹಿರಿಯರು ತಾವು ಕಂಡುದನ್ನು ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿಯನ್ನು ಕೊಡಲು ಹೋದ ಸಂದರ್ಭದಲ್ಲಿ ಆ ಮಕ್ಕಳನ್ನು ಹಿಡಿದು ಹೊಡೆದಿರತಕ್ಕದ್ದಷ್ಟೇ ಅಲ್ಲ, ಬೀದಿ ಬೀದಿಯಲ್ಲಿ ಬೆನ್ನು ಹತ್ತಿ ಹೊಡೆದಿದ್ದಾರೆ. ಇಂಥ ದೃಶ್ಯವನ್ನು ಕಣ್ಣಾರೆ ಕಂಡವರು ನಮಗೆ ವರ್ತಮಾನವನ್ನು ಕಳುಹಿಸಿದ್ದಾರೆ. ಜನರನ್ನು ಪ್ರಚೋದನೆ ಮಾಡಿ, ಬೆನ್ನು ಹತ್ತಿ, ನಾಯಿಗಳನ್ನು ಹೊಡೆದ ಹಾಗೆ ಹೊಡೆದಿದ್ದಾರೆ. ಈ ಬಗ್ಗೆ ನಾವು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ಇಂಥ ಪ್ರವೃತ್ತಿ ಪೋಲೀಸಿನವರಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡುವುದಾದರೆ ಈ ರಾಜ್ಯದಲ್ಲಿ ಪೋಲೀಸ್ ರಾಜ್ಯಸ್ಥಾಪನೆಯಾಗುವುದಕ್ಕೆ ಪ್ರಾರಂಭವಾಗುತ್ತದೆ. ಇಂಥ ಘಟನೆ ಇಲ್ಲಿ ಮಾತ್ರ ನಡೆದಿಲ್ಲ. ಮಂಗಳೂರಿನಲ್ಲಿ ಇದೇ ರೀತಿ ಘಟನೆ ನಡೆದಿದೆ. ಪೋಲೀಸಿನವರು ವಿದ್ಯಾರ್ಥಿಗಳ ಮೇಲೆ ಬಿದ್ದಿದ್ದಾರೆ. ವಿದ್ಯಾರ್ಥಿಗಳೇನಾದರೂ ಇವರ ಮೇಲೆ ಬಿದ್ದರೆ ಇವರು ನುಚ್ಚುನೂರಾಗುತ್ತಾರೆ. ಸರ್ಕಾರಕ್ಕೆ ಮತ್ತು ನಮಗೆ ವಿದ್ಯಾರ್ಥಿಗಳನ್ನು ರಕ್ಷಣೆ ಮಾಡತಕ್ಕ ಜವಾಬ್ದಾರಿ ಇದೆ. ಒಬ್ಬಿಬ್ಬರು ವಿದ್ಯಾರ್ಥಿಗಳು ಸೇರಿ ಅಕಸ್ಮಾತ್ತಾಗಿ ಇಂಥ ಘಟನೆ ನಡೆದರೆ, ಯಾರೀಗೋ ಘಾಯವಾಗಿದೆ, ಹೊಡೆತ ಬಿದ್ದಿದೆ ಎಂದು ಇಷ್ಟೊಂದು ವ್ಯಸನವನ್ನು ವ್ಯಕ್ತ ಮಾಡಬೇಕಾದ ಅಗತ್ಯವಿರಲಿಲ್ಲ. ಪತ್ರಿಕೆಗಳಲ್ಲಿ ಬಂದ ವರದಿ ಪ್ರಕಾರ, ನಮಗೆ ಕೆಲವರು ವರ್ತಮಾನ ಕಳುಹಿಸಿರುವ ಪ್ರಕಾರ ನೂರು ಜನಗಳಿಗೆ ಮೇಲ್ಪಟ್ಟು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಆಸ್ಪತ್ರೆಯಲ್ಲಿ ಸೇರಿದ್ದಾರೆ. ಕೆಲವರಿಗೆ ತೀವ್ರ ಘಾಯಗಳಾಗಿದ್ದು, ಕೆಲವರು ಬದುಕತಕ್ಕ ಸಂದರ್ಭ ಅನುಮಾನವಾಗಿದೆ. ಸರ್ಕಾರ ರಕ್ಷಣಾ ಇಲಾಖೆಯ ಇಂಥ ಮನೋವೃತ್ತಿ ಏನಿದೆ ಅದನ್ನು ತಡೆಗಟ್ಟುತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು. ಮಾನ್ಯ ಅಧ್ಯಕ್ಷರು ನಾನು ಕಳುಹಿಸಿರುವ ನಿಲುವಳಿ ಸೂಚನೆಯ ಮೇಲೆ ಚರ್ಚೆ ನಡೆಯಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

* ಶ್ರೀ ಎಸ್. ಬಂಗಾರಪ್ಪ (ಸೊರಬ) :— ಮಾನ್ಯ ಅಧ್ಯಕ್ಷರೇ, ತಾವು ಮೊದಲೇ ಮಾನ್ಯ ಮಂತ್ರಿಗಳಾದ ಚೆನ್ನಬಸಪ್ಪನವರು ಹಾಸನಕ್ಕೆ ಹೋಗಿದ್ದಾರೆಂದು ತಿಳಿಸಿದಿರಿ. ಅವರು ಹಾಸನಕ್ಕೆ ಹೋಗಿ ಪೋಲೀಸ್ ಠಾಣೆಯಲ್ಲಿ ಒಬ್ಬ ಬಾಲಕ ಸತ್ತು ಹೋಗಿರತಕ್ಕ ವಿಷಯದಲ್ಲಿ ಖುದ್ದಾಗಿ ವಿವರಗಳನ್ನು ತಿಳಿದು ಸಭೆಗೆ ತಿಳಿಸುವುದಾಗಿ ಹೇಳಿದ್ದನ್ನು ಕೇಳಿ ನಮಗೂ ಕೂಡ ಬಹಳ ಸಂತೋಷವಾಯಿತು. ಅವರು ಸ್ಥಳಕ್ಕೆ ಹೋಗಿಬಂದು ಸದನಕ್ಕೆ ಒಂದು ಹೇಳಿಕೆಯನ್ನು ಕೊಡುವುದರಿಂದ

ಅನುಕೂಲವಾಗುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ನಮಗೆ ಬಂದಿರುವ ತಕ್ಕ ವರದಿಯ ಪ್ರಕಾರ ಅವರು ಮಂಗಳೂರಿಗೆ ಹೋಗಬೇಕಾದ ಕಾರ್ಯಕ್ರಮವಿದ್ದು, ಹೋಗುವಾಗ ಹಾಸನಕ್ಕೆ ಹೋಗಿದ್ದಾರೆಂದು ಗೊತ್ತಾಗಿದೆ. ಮಾನ್ಯ ಚೆನ್ನಬಸಪ್ಪನವರು ಹಾಸನದಲ್ಲಿ ಉಳಿದರೇ, ಅಲ್ಲಿ ನಡೆದಿರುವ ಘಟನೆಗಳನ್ನು ಕಣ್ಣಾರೆ ಕಂಡರೇ, ಏನು ಎನ್ನುವ ವಿಚಾರಗಳು ನಮಗೆ ಗೊತ್ತಾಗಿಲ್ಲ. ಮಾನ್ಯ ಹನುಮೇಗೌಡರು ಹೇಳಿದ ವಿಚಾರಗಳನ್ನು ನಾನು ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ವಿದ್ಯಾರ್ಥಿಗಳನ್ನು ಬೇಕಾದಹಾಗೆ ಹೊಡೆದು ಪೋಲೀಸ್ ವ್ಯಾನಿಗೆ ಹಾಕಿಕೊಂಡಿದ್ದಾರೆ. ಇಷ್ಟೆಲ್ಲ ಆದ ನಂತರ ಪೋಲೀಸರ ಕೃತ್ಯಗಳನ್ನು ನೋಡಿ ಜನರಿಗೆ ಬೇಜಾರಾಗಿ ಪ್ರತಿಭಟನೆಯನ್ನು ಜನತೆ ವ್ಯಕ್ತ ಪಡಿಸಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ನಿಲುವಳಿ ಸೂಚನೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎನ್ನುವುದಕ್ಕೆ ನಾನು ಕಾರಣಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಘಟನೆ ಹಾಸನಕ್ಕೆ ಮಾತ್ರ ಸೀಮಿತವಾಗಿರುವ ವಿಷಯವಾದರೂ ಕೂಡ ಈ ಸರ್ಕಾರದ ಪೋಲೀಸ್ ಇಲಾಖೆಯಲ್ಲಿ ದಿನನಿತ್ಯ, ಗಂಟೆ ಗಂಟೆಗೂ ನಡೆಯುತಕ್ಕ ಕೆಲವಾರು ಘಟನೆಗಳು ಮತ್ತು ಮರಣಗಳು ಸಂಭವಿಸಿರತಕ್ಕದ್ದು ಈ ಸದನದ ಗಮನಕ್ಕೆ ಬಂದಿದೆ. ಗುಲ್ಬರ್ಗ, ರಾಣೆಬೆನ್ನೂರು, ಮಂಗಳೂರು ಹೀಗೆ ಅನೇಕ ಕಡೆಗಳಲ್ಲಿ ನಡೆದಿವೆ. ಇಂಥ ವಿಚಾರಗಳ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಬೇಕು, ಆಳವಾಗಿ ಅಭ್ಯಾಸ ಮಾಡಬೇಕು. ಹಾಗೆ ಮಾಡಿದರೆ ಸತ್ಯಾಂಶ ಹೊರಗೆ ಬಂದೀತು ಎಂದು ಹೇಳುತ್ತೇನೆ. ನಮಗೆ ಹಲವಾರು ಟ್ರಂಕ್‌ಕಾಲ್‌ಗಳು ಬಂದಿವೆ. ನಾವು ಯಾರೂ ಅಲ್ಲಿದ್ದು ಕಣ್ಣಾರೆ ಕಂಡವರಲ್ಲ. ಹಾಸನದಿಂದ ನಮಗೆ ವರದಿಗಳು ಸತತವಾಗಿ ಬರುತ್ತಿವೆ. ದಯಮಾಡಿ ಚರ್ಚೆಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು.

ಈ ಸದನದಲ್ಲರುವ ಎಲ್ಲ ಪಕ್ಷಗಳಿಂದ ಕೂಡಿದ ಸದಸ್ಯರನ್ನು ಸ್ಥಳ ಪರಿಶೀಲನೆಗೆ ತಾವು ಕಳುಹಿಸಿಕೊಡಬೇಕು ಮತ್ತು ಅವರು ಕೊಡುವ ವರದಿಯ ಮೇಲೆ ಈ ಸದನದಲ್ಲಿ ಚರ್ಚೆಯಾಗಬೇಕು ಎಂದೂ ಹೇಳಿ, ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ) :—ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತ ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

(ಶ್ರೀ ಹೆಚ್. ಎನ್. ಸಿದ್ದಪ್ಪ)

1-30 P. M.

ಮೊದಲನೇ ದಿವಸವೇ ಒಬ್ಬ ವಿದ್ಯಾರ್ಥಿ ಪೋಲೀಸ್ ಸ್ಟೇಷನ್‌ನಲ್ಲಿ ಮೃತನಾದ ಮೇಲೆ ಆಲ್ಲಿರುವ ಅಧಿಕಾರಿಗಳು ಈ ಪರಿಸ್ಥಿತಿ ಮುಂದೆ ವಿಕೋಪಕ್ಕೆ ಹೋಗಬಹುದು ಎಂದು ಗಮನಿಸಬೇಕಾಗಿತ್ತು. ಅಲ್ಲಿರುವ ಜಿಲ್ಲಾಧಿಕಾರಿಗಳೇ ಆಗಲಿ, ಪೋಲೀಸ್ ಅಧಿಕಾರಿಗಳೇ ಆಗಲಿ, ಈ ಬಗ್ಗೆ ಮುಂಜಾಗರೂಕತೆ ಕ್ರಮ ತೆಗೆದುಕೊಂಡಿದ್ದರೆ ಈ ಪರಿಸ್ಥಿತಿ ಇಷ್ಟೊಂದು ಉಲ್ಬಣವಾಗದಂತೆ ನೊಡೀಕೊಳ್ಳ ಬಹುದಾಗಿತ್ತು. ಆದುದರಿಂದ ಇದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಹೇಳುತ್ತೇನೆ. ಇದರ ಜೊತೆಗೆ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಕೊಡುವುದಕ್ಕೆ ಹೋದಾಗ ಆ ಜಿಲ್ಲಾಧಿಕಾರಿಗಳ ಆಫೀಸಿನಲ್ಲೇ ಲಾಠಿಚಾರ್ಜ್ ಮಾಡುವುದಕ್ಕೆ ಅವಕಾಶ ಕೊಟ್ಟರು. ಆದುದರಿಂದ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು ಎಂದು ದಯವಿಟ್ಟು ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ಸತ್ಯಾಂಶವನ್ನು ಅರಿಯುವುದಕ್ಕೆ ಮತ್ತು ಆ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುವುದಕ್ಕೆ ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ಸೇರಿ 5-6 ಜನರ ಒಂದು ಕಮಿಟಿ ಮಾಡಿ, ಇದಕ್ಕೆ ಒಬ್ಬ ಮಂತ್ರಿಗಳನ್ನು ನಾಯಕರನ್ನಾಗಿ ಮಾಡಿ ಈ ಬಗ್ಗೆ ಒಂದು ವಶದಿಯನ್ನು ಕೊಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿ ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎನ್. ಕೃಷ್ಣನ್ (ಮಲ್ಲೇಶ್ವರಂ) :—ಇದು ಗಹನವಾದ ವಿಚಾರ. ಇಂತಹ ಘಟನೆಗಳು ಹಲವಾರು ಕಡೆ ನಡೆದಿದೆ. ಇದು ಒಂದು ಪಾಲಿಸಿ ಕೊಶ್ಚನ್. ಆದುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ. ಏತಕ್ಕೆಂದರೆ ಇವೊತ್ತಿನ ದಿವಸ ದೇಶದಲ್ಲಿ ಏನು ಘಟನೆ ನಡೆಯುತ್ತಾ ಇವೆ, ಈ ಬಗ್ಗೆ ಸರ್ಕಾರದ ಧೋರಣೆ ಏನು, ಮತ್ತು ಪೋಲೀಸ್ ಅಧಿಕಾರಿಗಳ ಧೋರಣೆ ಏನು, ಮತ್ತು ಪೋಲೀಸಿನವರ ನೀತಿ ಏನು ಎಂದು ಅರಿಯಲು ಇದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಮತ್ತು ಇವೊತ್ತಿನ ದಿವಸ ಹಾಸನದಲ್ಲಿ ಇಂತಹ ಘಟನೆ ನಡಿದಿದೆ. ಇದರಲ್ಲಿ ಒಬ್ಬನನ್ನು ನಾಯಿಸಿದರು, ಮತ್ತು ಕೆಲವು ವಿದ್ಯಾರ್ಥಿಗಳನ್ನು ಹೊಡೆದರು ಎಂದು. ಇದು ತೀಕ್ಷ್ಣ ಖಂಡನೀಯವಾದುದು. ಈ ಪೋಲೀಸಿನವರ ಬಗ್ಗೆ ನಮಗೆ ಒಂದು ಸ್ಪಷ್ಟವಾದ ವಿಚಾರ ಬೇಕು. ಅದು ಏನೆಂದರೆ ಎಂತೆಂತಹ ಸಂದರ್ಭದಲ್ಲಿ ಹೇಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಕಳೆದ ತಿಂಗಳು 23ನೇ ತಾರೀಖು ಬೆಂಗಳೂರಿನಲ್ಲಿ ಒಂದು ಮೆರವಣಿಗೆ ಹೋದಾಗ ಪೋಲೀಸಿನವರು ಲಾಠಿ ಛಾರ್ಜು ಮಾಡಿದರು ಮತ್ತು ಟಿಯರ್‌ಗ್ಯಾಸನ್ನು ಉಪಯೋಗಿಸಿದರು.

ಅಧ್ಯಕ್ಷರು :—ತಾವು ಎಲ್ಲಿಂದ ಎಲ್ಲಿಗೋ ಹೋಗಿ ಬೇರೆ ವಿಷಯವನ್ನು ಎತ್ತಿಕೊಂಡು ವ್ಯಾತನಾಡುತ್ತಿದ್ದೀರಲ್ಲಾ !

ಶ್ರೀ ಎಂ. ಎಸ್. ಕೃಷ್ಣನ್ :—ಆ ರೀತಿ ಏನೂ ಇಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರಾಜ್ಯದ ಹಲವಾರು ಕಡೆಗಳಲ್ಲಿ ಅಂದರೆ ಬೆಂಗಳೂರು, ರಾಯಚೂರು ಮತ್ತು ಗುಲ್ಬರ್ಗಾ ಮುಂತಾದ ಕಡೆಗಳಲ್ಲಿ ಇಂತಹ ಘಟನೆಗಳು ನಡೆಯುತ್ತಾ ಇರಬೇಕಾದರೆ ನಾವು ಏನು ಮಾಡಬೇಕು ? ಆದುದರಿಂದ ಇದರ ಬಗ್ಗೆ ಒಂದು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಇದರ ಬಗ್ಗೆ ಒಂದು ವಿಚಾರಣೆ ನಡೆಸಬೇಕು; ಇದರ ಬಗ್ಗೆ ಜುಡಿಷಿಯರಿ ಪ್ರೋಬ್ ಮಾಡಿಸಬೇಕು. ಈ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಬೇಕು ಎಂದು ತಮ್ಮನ್ನು ಮತ್ತೊಮ್ಮೆ ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ತಮಗೆ ಇದರ ಬಗ್ಗೆ ಮನವರಿಕೆ ಆಗುವುದ ಕ್ಕೋಸ್ಕರ ನಾವು ಆದಕ್ಕೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ ಎಂದು ಕೇಳಿ ಕೊಳ್ಳುತ್ತೇವೆ. ಮತ್ತು ಅವರಲ್ಲಿ ಇಲ್ಲದೇ ಇರುವ ಅಂಶಗಳೂ ಕೂಡ ನಮ್ಮಲ್ಲಿ ಇರುವುದರಿಂದ ನಾವು ಅದನ್ನು ಇಲ್ಲಿ ಹೇಳಬೇಕಾಗಿದೆ.

ಅಧ್ಯಕ್ಷರು :—ನನಗ ಮನವರಿಕೆಯಾಗಿದೆ. ಈ ಬಗ್ಗೆ ಸರ್ಕಾರ ಏನು ಹೇಳುತ್ತದೆ ಕೇಳೋಣ.

ಶ್ರೀ ಹೆಚ್. ಟಿ ಕೃಷ್ಣಪ್ಪ :—ಅಧ್ಯಕ್ಷರೇ, ಈ ಬಗ್ಗೆ ಗಮನಿಸ ಬೇಕಾದಂಥ ಅಂಶಗಳು ಮುಖ್ಯವಾದುದು ಮೂರು ಅಂಶಗಳು. ಅದರಲ್ಲಿ ಮೊದಲನೆಯದಾಗಿ ನಿನ್ನೆ ಹಾಸನದಲ್ಲಿ ನಡೆದಂಥ ಘಟನೆ ನೋಡಿದರೆ ಪತ್ರಿಕಾ ವರದಿ ಪ್ರಕಾರವೇ ಆಗಲಿ ಅಥವಾ ಬೇರೆ ಮೂಲಗಳಿಂದ ಬಂದ ವರದಿ ಪ್ರಕಾರವೇ ಆಗಲಿ, ನೋಡಿದರೆ ಅಲ್ಲಿ ವಿದ್ಯಾರ್ಥಿಗಳು ಕಾನೂನು ವಿರೋಧಿ ಹಿಂಸಾತ್ಮಕ ಕೃತ್ಯದಲ್ಲಿ ಭಾಗವಹಿಸಿದ್ದಾರೆ ಎನ್ನುವ ವರದಿ ಇಲ್ಲ. ಅಲ್ಲದೆ 2-3 ಸಂದರ್ಭಗಳಲ್ಲಿ ಪೋಲೀಸಿನವರು ತಮ್ಮ ಹದ್ದುಮೀರಿ ತಮ್ಮ ಅಧಿಕಾರವನ್ನು ವಿದ್ಯಾರ್ಥಿಗಳ ಮೇಲೆ ಚಲಾಯಿಸಿದ್ದಾರೆ. ಇದಕ್ಕೆ ಸಾಕಾದಷ್ಟು ಪತ್ರಿಕೆಗಳಲ್ಲಿ ಆಧಾರಗಳು ಇವೆ.

ಇನ್ನೊಂದು ಮುಖ್ಯವಾದ ಪ್ರಶ್ನೆ ಏನೆಂದರೆ ಅವರು ಆಹಾರ ಪದಾರ್ಥಗಳ ಬೆಲೆ ಏರಿಕೆ ಬಗ್ಗೆ ಪ್ರೊಪೋಷಣೆ ಮಾಡಿಕೊಂಡು ಶಾಂತಿಯುತವಾದ ಪ್ರದರ್ಶನ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಮಾಡಿಕೊಂಡು ಬರುತ್ತಿದ್ದರೇ ವಿನಾ ಬೇರೆ ಇನ್ನಾವ ಉದ್ದೇಶವೂ ಇರಲಿಲ್ಲ ಎಂದು ಹೇಳುತ್ತೇನೆ. ಮತ್ತು ಯಾವ ಒಂದು ಪತ್ರಿಕೆಯಲ್ಲಿ ನೋಡಿದರೂ ಸಹಿತ ವಿದ್ಯಾರ್ಥಿಗಳು ದಾರಿ ತಪ್ಪಿ ಹೋದರು, ಶಾಂತಿಭಂಗ ಮಾಡಿದರು ಎಂದು ಕೊಟ್ಟಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಇತರೇ ಅಧಿಕಾರಿಗಳು ಯಾವ ರೀತಿ ನಡೆದುಕೊಂಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ.

ಅಧ್ಯಕ್ಷರು :—ತಾವು ರೂಲ್ಸ್‌ಗೆ ಸಂಬಂಧಪಟ್ಟಂತೆ ಮಾತನಾಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಶ್ರೀ ಮಾನ್ ಎಂ. ಎಸ್. ಕೃಷ್ಣನ್‌ನವರು ಈ ಬಗ್ಗೆ ಏನು ಹೇಳಿದರು ಆ ಒಂದು ದೃಷ್ಟಿಕೋನದಲ್ಲಿ ಯೋಚನೆ ಮಾಡಬೇಕು. ಮತ್ತೆ ಇನ್ನೊಂದು ವಿಷಯ ಹೇಳುವುದಾದರೆ ಈಗ ಅಧಿಕಾರದಲ್ಲಿರುವ ಪಕ್ಷಕ್ಕೆ ಹಾಸನ ಜಿಲ್ಲೆಯಿಂದ ಹೆಚ್ಚಾಗಿ ಪ್ರಾತಿನಿಧ್ಯ ಸಿಕ್ಕಿಲ್ಲ, ಏತಕ್ಕೇದರೆ ನಾವು 4 ಜನ ಅಲ್ಲಿಂದ ಗೆದ್ದು ಬಂದಿದ್ದೇವೆ. ಆದುದರಿಂದ ಇಂಥಹ ಘಟನೆ ಹಾಸನ ಜಿಲ್ಲೆಯಲ್ಲಿ ನಡೆಯುತ್ತಾ ಇದೆ ಮತ್ತು ಅಲ್ಲಿ ಜನರನ್ನು ನದೆ ಬಡಿಯುತ್ತಿದ್ದಾರೆ, ಆದುದರಿಂದ ಇದಕ್ಕೆ ರಾಜಕೀಯ ಪ್ರೇರಣೆ ಇದೆ ಎಂದು ಹೇಳುತ್ತೇನೆ ಆದ ಕ್ಕೋಸ್ಕರ ಮಾನ್ಯ ಶ್ರೀ ಮಾನ್ ಎಂ. ಎಸ್. ಕೃಷ್ಣನ್‌ರವರು ಹೇಳಿದ ಹಾಗೆ ಇದಕ್ಕೆ ನ್ಯಾಯಾಂಗ ವಿಚಾರಣೆ ಮಾಡಿದರೆ ಯಾರು ತಪ್ಪಿತಸ್ಥರು ಎಂಬುದು ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಈ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಲು ನೇರವಾಗಿ ಅವರು ಒಪ್ಪಿಕೊಂಡರೆ ಈ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡುವ ಅವಶ್ಯಕವೇ ಇಲ್ಲ. ಆದುದರಿಂದ ತಾವು ಇದರ ಬಗ್ಗೆ ತೀರ್ಪು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಂಜೇಗೌಡ : ಅಧ್ಯಕ್ಷರೇ, ಈ ವಿಚಾರದಲ್ಲಿ ನನಗೆ ಮಾತ ನಾಡಲು ಸ್ವಲ್ಪ ಅವಕಾಶ ಕೊಡಬೇಕು. ಈ ಬಗ್ಗೆ ನಾನು ಹೇಳುವುದಾದರೆ ನಾನು ನಿನ್ನೆ ದಿವಸ ಅಲ್ಲಿಗೆ ಹೋಗಿದ್ದೆ. ಆ ಕಡೆಯ ಸ್ನೇಹಿತರು ನಿನ್ನೆಯ ದಿವಸ ಹಾಸನದಲ್ಲಿ ನಡೆದಂಥ ಘಟನೆ ಬಗ್ಗೆ ಬಹಳ ಕಳಕಳಿಯಿಂದ ವ್ಯಕ್ತಪಡಿಸಿದರು, ಮತ್ತು ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ನಾನು $2\frac{1}{2}$-3 ಗಂಟೆ ಸಮಯದಲ್ಲಿ ಹಾಸನದಲ್ಲಿ ಇದ್ದೆ. ಹಾಸನದಲ್ಲಿ ನಡೆದಂಥ ಘಟನೆ ಏಕಪಕ್ಷದಿಂದ ಈ ದೌರ್ಜನ್ಯ ನಡೆದಿದೆ ಎಂದು ಹೇಳುವುದು ಇದು ಉತ್ಪ್ರೇಕ್ಷೆ ಮಾತು ಎಂದು ಹೇಳುತ್ತೇನೆ. ಮಾನ್ಯ ಸ್ನೇಹಿತರು ಆ ರೀತಿ ಹೇಳಿದ್ದರಿಂದ ನಾನು ಒಂದೆರಡು ಮಾತುಗಳನ್ನಾಡಬೇಕಾಗಿದೆ.

ಅಧ್ಯಕ್ಷರು : ಆ ವಿಷಯ ಇನ್ನೂ ಚರ್ಚೆಗೆ ಬಂದಿಲ್ಲ. ಇದಕ್ಕೆ ಸರ್ಕಾರ ಏನು ಹೇಳುತ್ತದೆ ಕೇಳೋಣ.

‡ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು): — ಅಧ್ಯಕ್ಷರೇ, ನಿನ್ನೆ ದಿವಸ ಈ ವಿಷಯ. ಈ ಸಭೆಗೆ ಬಂದಾಗ ಈ ಸಭೆಯಲ್ಲಿ ಹಾಜರಿದ್ದ ಮಾನ್ಯ ಲೋಕೋಪಯೋಗಿ ಸಚಿವರು ಹಾಸನಕ್ಕೆ ಖುದ್ದಾಗಿ ಹೋಗಿ ತಿಳಿದು ಕೊಳ್ಳುತ್ತೇನೆ ಎಂದು ಹೇಳಿದುದು ತಮಗೆ ಗೊತ್ತಿದೆ. ಅವರು ಅಲ್ಲಿಗೆ ಹೋಗಿ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ ವರದಿ ನನಗೆ ಇನ್ನೂ ಬಂದಿಲ್ಲ.

ಶ್ರೀ ಕೋಣಂಡೂರು ಲಿಂಗಪ್ಪ : ಅವರು ಮಂಗಳೂರಿಗೆ ಹೋದರು

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅವರು ಮಂಗಳೂರಿಗೆ ಹೋದರೂ ನಹ ಹಾಸನಕ್ಕೆ ಹೋಗಿ ಈ ವಿಷಯವನ್ನು ತಿಳಿದುಕೊಂಡೇ ಹೋಗಿದ್ದಾರೆ. ಇದರಲ್ಲಿ ತಾವು ಏನೂ ಅನುಮಾನ ಮಾಡಬೇಕಾದ್ದಿಲ್ಲ. ಅಲ್ಲಿ ಇರತಕಂಥ ನಮ್ಮ ಅಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಬಂದಿರತಕ್ಕ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ ಹಾಸನ ಬಂದ್‌ಗೆ ಸಂಬಂಧಪಟ್ಟಂತೆ ಗೌರ್ನಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಇರಿಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸುಮಾರು ಒಂದು ಸಾವಿರ ಜನ ಸೇರಿ ಪೋಲೀಸ್ ಸ್ಟೇಷನ್ ಎದುರಿಗೆ ಹೋಗಿ ಏನು ಮಾಡಿದರು ಎಂದರೆ ಹಿಂದೆ ಒಬ್ಬನ ಮರಣಕ್ಕೆ ಕಾರಣರಾದ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಹೊರಗೆ ಬರಬೇಕು ಎಂದು ಪೋಲೀಸ್ ಸ್ಟೇಷನ್ ಮುಂದೆ ಹೋಗಿ ಕೂಗು ಹಾಕಿ ಒತ್ತಾಯ ಮಾಡಿದರು. ನಂತರ ಸ್ವಲ್ಪ ಹೊತ್ತಾದ ಮೇಲೆ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆ ಹೋದರು. ಅಲ್ಲಿ ಜಿಲ್ಲಾಧಿಕಾರಿಗಳು ಇಲ್ಲದೆ ಇದ್ದರೂ ಕೂಡ ಅಲ್ಲಿ ಆಫೀಸಿನಲ್ಲಿರುವ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್ಸ್ ಜೊತೆಯಲ್ಲಿ ವಿದ್ಯಾರ್ಥಿಗಳಲ್ಲಿ ಕೆಲವರು ಹೋಗಿ ಚರ್ಚೆ ಮಾಡುತ್ತಿದ್ದ ಹಾಗೇನೇ ಹೊರಗಡೆಯಿಂದ ಕಲ್ಲು ಬೀಳಲು ಪ್ರಾರಂಭವಾಯಿತು. ಈ ರೀತಿ ಕಲ್ಲು ಬೀಳಲು ಪ್ರಾರಂಭವಾದುದರಿಂದ ಒಳಗೆ ಮತ್ತು ಹೊರಗೆ ಇದ್ದಂಥ ಗುಂಪನ್ನು ಚದುರಿಸುವ ಉದ್ದೇಶದಿಂದ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕಾಯಿತು. ಅದಕ್ಕೆ ಲಾಠಿ ಛಾರ್ಜ್ ಮತ್ತು ಟಿಯರ್ ಗ್ಯಾಸ್ ಇವೆಲ್ಲಾ ಅವಶ್ಯಕವಾಗಿ ಮಾಡಬೇಕು ಎಂದು ಕಂಡು ಬಂದದ್ದರಿಂದ ಈ ಕೆಲಸವನ್ನು ಮಾಡಬೇಕಾಯಿತು.

ಮತ್ತೆ ಅಲ್ಲಿಂದ ಚದುರಿ ವಿದ್ಯಾರ್ಥಿಗಳ ತಂಡದವರು ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸ್ ಹತ್ತಿರ ಹೋಗಿ ಅಲ್ಲಿ ಕೂಡ ಗಲಾಟೆ ಮಾಡಿದರು ಎಂದು ಇಷ್ಟು ಇರತಕ್ಕಂಥ ಮತ್ತು ಅಲ್ಲಿ ನಡೆದಂಥ ಪ್ರಸಂಗ. ಅದರಲ್ಲಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

20 ಜನಗಳನ್ನು ದಸ್ತಗಿರಿ ಮಾಡಿದ್ದಾರೆ 26 ಜನರಿಗೆ ಏಟು ಬಿದ್ದಿದೆ. ಅದರಲ್ಲಿ 10 ಜನರು ಇನ್‌ಪೇಷಂಟ್ ಆಗಿ ಆಸ್ಪತ್ರೆಯಲ್ಲಿದ್ದಾರೆ. 11 ಜನರು ಔಟ್ ಪೇಷಂಟ್‌ಗಳಾಗಿದ್ದಾರೆ. ಇದಲ್ಲದೆ 21 ಜನರ ಪೈಕಿ 16 ಜನ ಔಟ್‌ಪೇಷಂಟ್ 5 ಜನ ಇನ್‌ಪೇಷಂಟ್‌ಗಳಾಗಿ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದಾರೆ. 20 ಜನರು ವಿದ್ಯಾರ್ಥಿಗಳಲ್ಲದೆ ಇರತಕ್ಕಂಥವರು ದಸ್ತಗಿರಿಯಾಗಿರುತ್ತಾರೆ. ಇನ್ನು ಇದರ ಜೊತೆಗೆ ಏಟು ಬಿದ್ದಿರತಕ್ಕಂಥದ್ದು ಪೋಲೀಸ್ ಅಧಕಾರಿಗಳು ಯಾರುಯಾರಿಗೆ ಏಟು ಬಿದ್ದಿದೆ ಎಂದು ತಿಳಿಸುತ್ತೇನೆ ಒಬ್ಬರು ಎ ಎಸ್. ಪಿ., ಒಬ್ಬರು ಪೋಲೀಸ್ ಇನ್ಸ್‌ಪೆಕ್ಟರ್, 8 ಜನ ಎಂ.ಎಸ್ ಆರ್.ಎ ಪಿ, 7 ಜನ ಸಿವಿಲ್ ಪೋಲಿಸರು, ಇಬ್ಬರು ಡಿ. ಎ. ಆರ್. ಪಿ. ಇಷ್ಟು ಜನರಿಗೆ ಏಟು ಆಗಿದೆ. ಇವರಿಗೂ ಔಷಧಿ ಕೊಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :—ಬಹುಶಃ ವಿದ್ಯಾರ್ಥಿಗಳನ್ನು ಹೊಡೆದು ಇವರ ಕೈಗಳಿಗೆ ಏಟು ಬಿದ್ದಿರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಪೋಲೀಸರಿಗೆ ಏಟು ಬಿದ್ದಿದೆಯೆಂದು ಹೇಳಿದ್ದಕ್ಕೆ ಇಷ್ಟು ಗಲಾಟೆ ಮಾಡುತ್ತಿದ್ದಾರೆ. ಇದಕ್ಕೆ ಮೊದಲು ಜನಗಳಿಗೆ ಏಟು ಬಿದ್ದಿರುವುದನ್ನು ಹೇಳುತ್ತಿದ್ದಾಗ ನಮ್ಮನೆ ಇದ್ದರು.

ಶ್ರೀ ಕೆ. ಎಚ್. ಹನುಮೇಗೌಡ :— ಇಷ್ಟು ಮಾತ್ರ ಹೇಳುತ್ತೇನೆ ಇದು ಮಾತ್ರ ಶುದ್ಧ ಸುಳ್ಳು. ಮಂತ್ರಿಗಳು ಏನು ಈ ರೀತಿ ಹೇಳುತ್ತಾ ಇದ್ದಾರಲ್ಲ ಇದು ಸತ್ಯಕ್ಕೆ ದೂರವಾದುದು.

ಶ್ರೀ ಎಂ. ಎಸ್. ಕೃಷ್ಣನ್ :—ಇಲ್ಲಿ ಮಂತ್ರಿಗಳು ಕತೆ ಹೇಳುತ್ತಿದ್ದಾರೆ. ಅಲ್ಲಿ ನಿಜವಾಗಿ ನಡೆದಿರುವುದು ಒಳಗಡೆ ಹೋಗಿದ್ದವರಲ್ಲಿ 5 ಜನರನ್ನು ಹೊರಗಡೆ ಹಿಡಿದುಕೊಂಡು ಬಂದು ಹೊಡೆದಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಇವರು ಏನಾದರೂ ಹೇಳಿದ್ದಾರೆಯೇ?

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿರುವ ತಮ್ಮ ಮುಖಾಂತರ ಕೇಳುವುದೇನಂದರೆ ಶ್ರೀಮಾನ್ ಚೆನ್ನಬಸಪ್ಪನವರು ಆಲ್ಲಿಗೆ ಹೋಗಿ ಅಲ್ಲಿ ನಡೆದಿರುವುದನ್ನು ಪರಿಶೀಲಿಸಿ ವರದಿಯನ್ನು ತರುತ್ತಾರೆಂದು ತಿಳಿದಿದ್ದೆವು. ಹಾಗೆ ಮಾಡದೆ ಅವರು ಹಾಗೆಯೇ ಬೇರೆ ಕಡೆ ಹೋಗಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆಮಾಡಿ ಒಂದು ವರದಿ ಕೊಟ್ಟಿದ್ದರೆ ನಾವು ಒಪ್ಪುತ್ತಾ ಇದ್ದೆವು. ಈಗ ನಾನು ಹೇಳುವುದು ಮಾನ್ಯ ಮಂತ್ರಿಗಳು ಮತ್ತು ಬಾಕಿಯವರು ಹೋಗಿ ಅಲ್ಲಿ ಒಂದುಗಂಟೆ ಇದ್ದು ಅಲ್ಲಿನ

ಪರಿಸ್ಥಿತಿಯನ್ನು ಪರಿಶೀಲನೆ ಮಾಡಿಕೊಂಡು ಬಂದರೆ ಎಲ್ಲಾ ಗೊತ್ತಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ :— ಈಗ ನನ್ನಲ್ಲಿ ಇರತಕ್ಕಂಥ ವಿಷಯವನ್ನು ಸದ್ಯಕ್ಕೆ ಗೊತ್ತಿರತಕ್ಕಂಥ ವಿಷಯವನ್ನು ಸಭೆಗೆ ತಿಳಿಸಿದ್ದೇನೆ ಇನ್ನು ಮುಂದೆ ಜನರು ತಿಳಿಸಲಿ, ಪೋಲೀಸರೇ ತಿಳಿಸಲಿ ಅದನ್ನು ಸರ್ಕಾರ ಎಚ್ಚರಿಕೆಯಿಂದ ನೋಡುತ್ತಿದ್ದು ಹೆಚ್ಚು ವಿಷಯ ತಿಳಿಸಬೇಕಾದ ಅವಶ್ಯಕತೆ ಬಂಡರೆ ಸಭೆಗೆ ತಿಳಿಸುತ್ತೇನೆ.

ಅಧ್ಯಕ್ಷರು :— ತಾವು ಕಳುಹಿಸಿರುವ ನೋಟೀಸು ತಲ್ಪಿ ಹಾಕಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಶ್ರೀ ಮೂನ್ ಚೆನ್ನಬಸಪ್ಪನವರು ಬಂಡು ಒಂದು ವರದಿಯನ್ನು ಕೊಟ್ಟಿದ್ದರೆ ನಾವು ಒಪ್ಪುತ್ತಿದ್ದೆವು.

ಅಧ್ಯಕ್ಷರು :—ಅವರು ಬರುತ್ತಾರೆ, ಆವರು ಸಹ ಹೇಳುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ :—ನಾನು ಶ್ರೀಮೂನ್ ಚೆನ್ನಬಸಪ್ಪನವರನ್ನು ಕೇಳಿಕೊಂಡೆ ತಾವು ಹೋಗುವಾಗ ಶ್ರೀಮೂನ್ ಹನುಮೇಗೌಡರನ್ನು ಕರೆದುಕೊಂಡು ಹೋಗಿ ಎಂದು. ಆದರೆ ಅವರು ವಯೊ ಹಾಸನ ನಾನು ಮಂಗಳೂರಿಗೆ ಹೋಗುತ್ತೇನೆ ಆದ್ದರಿಂದ ಅವರು ಬರುವುದು ಪ್ರಯೋಜನವಿಲ್ಲ ಎಂಡು ಹೇಳಿದರು.

ಅಧ್ಯಕ್ಷರು :—ಅವರು ಏನು ಕೆಲಸ ಮಾಡಿದ್ದಾರೆ ಎಂಬುದು ತಮಗೆ ಗೊತ್ತಿದೆ.

ಎಚ್. ಟಿ. ಕೃಷ್ಣಪ್ಪ :— ಅವರು ಎಲ್ಲಿ ಎಲ್ಲಿಗೆ ಹೋಗಿದ್ದಾರೆ ಎನ್ನುವುದು ತಮಗೆ ಗೊತ್ತಿದೆಯೇ ?

ಅಧ್ಯಕ್ಷರು :—ತಾವು ಹಾಗೆ ಹೇಳಬಾರದು. ತಾವು ಈ ರೀತಿ ಮಾತನಾಡುವುದು ಸ್ವಲ್ಪವೂ ಸರಿಯಲ್ಲ. ಅವರು ಈ ಸಭೆಯಲ್ಲಿ ನಾನು ಅಲ್ಲಿಗೆ ಹೋಗಿ ನೋಡಿ ಮುಂದೆ ಹೋಗುತ್ತೇನೆಂದು ಹೇಳಿದರು. ಸದಸ್ಯರು ಇಷ್ಟು ಹಗುರವಾಗಿ ಮಾತನಾಡುವುದು ಸರಿಯಲ್ಲ. ಮಾತನಾಡಿದರೆ ಸ್ವಲ್ಪ ತೂಕವಾಗಿ ಇರಬೇಕು; ಬೇಗರ ಮನೆಯಲ್ಲಿ ಊಟಕ್ಕೆ ಹೋಗುತ್ತಾರೆಂದು, ಇಲ್ಲಿ

(ಅಧ್ಯಕ್ಷರು)

ಭರವಸೆ ಕೊಡುತ್ತಾರೆಂದು ಆ ರೀತಿ ಮಾತನಾಡುವುದು ಸ್ವಲ್ಪವೂ ಸರಿಯಿಲ್ಲ, ಇದು ಚೆನ್ನಾಗಿರುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಶ್ರೀಮಾನ್ ಚೆನ್ನಬಸಪ್ಪನವರು ಸುಮಾರು ಏಳುವರೆ ಗಂಟೆಗೆ ಹಾಸನ ತಲುಪಿ ಅಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ರವರನ್ನು ಕರೆಸಿ ಮುಂಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿ ಹೋಗಿದ್ದಾರೆ.

ಅಧ್ಯಕ್ಷರು :— ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೊಣಂದೂರು ಲಿಂಗಪ್ಪ :— ಮಾನ್ಯ ಮಂತ್ರಿಗಳ ವರದಿಪ್ರಕಾರ ಪೋಲೀಸ್ ಸೂಪರಿಂಟೆಂಡೆಂಟ್‌ರವರನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಕರೆಸಿ ಕೇಳಿದ್ದಾರೆ ಎಂದು ಹೇಳಿರುವುದರಿಂದ ಅವರು ಯಾವ ವಿದ್ಯಾರ್ಥಿ ಮುಂಖಿಡ ರನ್ನಾದರೂ ಕರೆಸಿಕೊಂಡು ಕೇಳಿದ್ದರೆ ನಾವು ಒಪ್ಪಬಹುದಾಗಿತ್ತು. ಇವರು ಪೋಲೀಸ್ ಅಧಿಕಾರಿಗಳನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಕರೆಸಿಕೊಂಡು ಕೇಳಿರುವುದರಿಂದ ಅದರಲ್ಲೇ ಗೊತ್ತಾಗುತ್ತದೆ ಅವರ ಪಕ್ಷಪಾತ ನೀತಿ ?

ಶ್ರೀ ಎಚ್. ಟಿ. ಕೃಷ್ಣಪ್ಪ :— ನಾನು ಹೇಳುವುದು ಇಷ್ಟೇ ಅವರು ಅಲ್ಲಿಗೆ ಹೋಗುವುದಾದರೆ ಅಲ್ಲಿನ ಪರಿಸ್ಥಿತಿ ಬಹಳ ಪ್ರಕ್ಷುಬ್ಧವಾಗಿರುವುದರಿಂದ ಅವರಿಗೆ ಭಯ ಇದ್ದರೆ ನಮ್ಮ ಪ್ರಾಣವನ್ನು ಕೊಟ್ಟು ಅವರ ಪ್ರಾಣವನ್ನು ಉಳಿಸುತ್ತೇವೆ. ಅವರು ಬರಲಿ ಅವರ ಜೊತೆಯಲ್ಲಿ ನಾವು ಹೋಗುತ್ತೇವೆ.

ಅಧ್ಯಕ್ಷರು :— ಮೊದಲು ಮಾನ್ಯ ಚೆನ್ನಬಸಪ್ಪನವರು ಬರಲಿ. ಅವರು ಸ್ಟೇಟ್‌ಮೆಂಟ್ ಇಡುವವರೆಗೆ ಚರ್ಚೆಗೆ ಯಾವ ರೀತಿಯಿಂದಲೂ ಅವಕಾಶವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ನಾನು ಹೇಳುವುದು ಹಾಗೆ ಇದ್ದಮೇಲೆ ಇಲ್ಲಿ ನನ್ನ ಚರ್ಚೆಯಾದ ಮೇಲೆ ಅಲ್ಲಿ ಒಂದು ದುರ್ಘಟನೆ ನಡೆದಿದೆ. ಮಾನ್ಯ ಚೆನ್ನಬಸಪ್ಪನವರು ಅಲ್ಲಿ ನಡೆದಿರತಕ್ಕಂಥ ಪರಿಸ್ಥಿತಿಯನ್ನು ತಮಗೆ ವರದಿ ಮಾಡಿದ್ದರೆ ನಾವು ಆ ವರದಿಯನ್ನು ಒಪ್ಪಿಕೊಳ್ಳುತ್ತೇವೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಆಸ್ಪತ್ರೆಯೊಳಗೆ ಇದ್ದಾರೆ ?

ಅಧ್ಯಕ್ಷರು :— ಈಗ ಹೊಸದಾಗಿ ಏನೂ ನಡೆದಿಲ್ಲ. ಎಲ್ಲಾ ವಿಷಯಗಳನ್ನು ನಿನ್ನೆ ಶ್ರೀಮಾನ್ ಹನುಮೇಗೌಡರು ಚರ್ಚೆಮಾಡಿದ್ದಾರೆ ಅದ್ದರಿಂದ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ಇಷ್ಟು ಧೀರ್ಘವಾದ ವಿವರಗಳು ನಮಗೆ ನಿನ್ನೆ ಸಿಕ್ಕಿರಲಿಲ್ಲ.

ಅಧ್ಯಕ್ಷರು :—ಇದು ಮುಗಿಯಿತು. ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಇದರ ವಿಚಾರದಲ್ಲಿ ಇನ್ನು ಮುಂದೆ ಏನೂ ಮಾಡುವುದಕ್ಕಾಗುವುದಿಲ್ಲ.

(ಆರು ಜನ ವಿರೋಧಪಕ್ಷದ ಸದಸ್ಯರು ಎದ್ದುನಿಂತರು)

ಅಧ್ಯಕ್ಷರು.—ಮೊದಲು ತಾವೆಲ್ಲ ಕುಳಿತುಕೊಳ್ಳಬೇಕು

ಶ್ರೀ ಎಸ್. ಬಂಗಾರಪ್ಪ.—ನಮಗೆ ಚೆನ್ನಬಸಪ್ಪನವರು ಬೇಕು.

ಅಧ್ಯಕ್ಷರು.—ಚೆನ್ನಬಸಪ್ಪನವರು ಸೋಮವಾರ ಬರುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಮಾನ್ಯ ಚೆನ್ನಬಸಪ್ಪನವರನ್ನು ಫೋನ್‌ನಲ್ಲಿ ಕಾಂಟ್ಯಾಕ್ಟ್ ಮಾಡಿ ಅಲ್ಲಿ ಏನೇನು ನಡೆಯಿತು ಎನ್ನುವುದನ್ನು ತಿಳಿದು ನಭೆಗೆ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ದಯವಿಟ್ಟು ತಾವು ಕೂಡ ನಾಳೆ ಅಲ್ಲಿಗೆ ಹೋಗಿ ಬನ್ನಿ.

ಅಧ್ಯಕ್ಷರು. - ಹಾಗಾದರೆ ಅವರು ಏಕೆ ಹೋಗಬೇಕು?

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಇಲ್ಲಿ ಪೋಲೀಸರು ಕೊಟ್ಟ ವರದಿಯನ್ನು ನಮಗೆ ಕೊಡುತ್ತಿದ್ದಾರೆ. ಅದರ ಬಗ್ಗೆ ನಾವು ಸಂಶಯವನ್ನು ವ್ಯಕ್ತಪಡಿಸುತ್ತೇವೆ.

ಅಧ್ಯಕ್ಷರು. —ಮಾನ್ಯ ಚೆನ್ನಬಸಪ್ಪನವರ ರಿಪೋರ್ಟ್ ಬಂದ ನಂತರ ಅದೆಲ್ಲಾ ಸಾಧ್ಯ.

ಶ್ರೀ ಕಾಗೋಡು ತಿಮ್ಮಪ್ಪ.—ಅವರ ರಿಪೋರ್ಟು ಇವತ್ತು ಬರುವುದಾದರೆ ನಾವು ನೆಮ್ಮದಿಯನ್ನು ಇಟ್ಟುಕೊಳ್ಳಬಹುದಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರೆವಿನ್ಯೂ ಮಂತ್ರಿಗಳು, ಈಗ ತಮ್ಮ ಹೇಳಿಕೆಯಲ್ಲಿ, ಚೆನ್ನಬಸಪ್ಪನವರು ಬರೀ ಪೋಲೀಸ್ ಅಧಿಕಾರಿಗಳನ್ನು ನೋಡಿ ಕೊಂಡು ಮುಂದೆ ಹೋದರು ಎಂದು ಹೇಳಿದರು. ಅವರು ಅಲ್ಲಿ ಮತ್ತೆ ಯಾರನ್ನು ಕಂಡರು? ಇಂಥ ವರದಿಯನ್ನು ಇಟ್ಟುಕೊಂಡು ನಾವು ಇದನ್ನು ಇತ್ಯರ್ಥ ಮಾಡಲಿಕ್ಕೆ ಆಗುತ್ತದೆಯೇ, ತಾವೇ ಯೋಚನೆ ಮಾಡಿ ?

ಅಧ್ಯಕ್ಷರು.—ಮಂತ್ರಿಗಳು ಬರಲಿ, ಅವರು ರಿಪೋರ್ಟು ಹೇಳುವವರೆಗೂ ನಾವು ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಚೆನ್ನಬಸಪ್ಪನವರು ಎಲ್ಲಿದ್ದಾರೆ ? ಯಾವತ್ತು ಬರುತ್ತಾರೆ ? ಪ್ರಶ್ನೆ ಗಂಭೀರವಾಗಿರುವುದರಿಂದ, ತಾವು ಅವರು ಎಲ್ಲಿದ್ದಾರೋ ಅಲ್ಲಿಂದ ಕರೆಸಬೇಕು

ಅಧ್ಯಕ್ಷರು.—ಅವರು ಅವರ ಕೆಲಸವನ್ನು ಮುಗಿಸಿಕೊಂಡು ಬರುತ್ತಾರೆ. ಇದರ ಬಗೆ ತಮ್ಮಗಳಿಗೆ ಎಷ್ಟು ಅತಂಕ ಇದೆಯೋ ಅಷ್ಟೇ ಅಂತಕ ಸರ್ಕಾರಕ್ಕೂ ಇರುತ್ತದೆ. ಅಲ್ಲಿ ಏನು ನಡೆದಿದೆ ಎನ್ನುವುದನ್ನು ಸ್ಟೇಟ್‌ಮೆಂಟ್‌ಅನ್ನು ಈ ಸಭೆಯ ಮುಂದೆ ಇಡುತ್ತೇನೆಂದು ಅವರು ಒಪ್ಪಿಕೊಂಡು ಹೋಗಿದ್ದಾರೆ. ಅವರಿಗೂ ಜವಾಬ್ದಾರಿ ಇದೆ ಮಾನ್ಯ ಮಂತ್ರಿಗಳು ಬಂದನಂತರ ಸ್ಟೇಟ್‌ಮೆಂಟ್ ಅನ್ನು ಸಭೆಯ ಮುಂದೆ ಇಡುತ್ತಾರೆ ಮಾನ್ಯ ಕಂದಾಯ ಶಾಖೆಯ ಮಂತ್ರಿಗಳೂ ಸಹ, ಮಾನ್ಯ ಚೆನ್ನಬಸಪ್ಪನವರನ್ನು ಫೋನ್‌ನಲ್ಲಿ ಕಾಂಟ್ಯಾಕ್ಟ್ ಮಾಡಿ ವಿವರವನ್ನು ಇಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಬದಲಾಗಿ ತಾವು, ನಮ್ಮನ್ನು ಕಳುಹಿಸಿ, ಎಂದೆಲ್ಲಾ ಹೇಳಿದರೆ, ಅದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳಿಂದ ರಿಪೋರ್ಟು ಬರಲಿ, ಮುಂದೆ ನೋಡೋಣ.

ಶ್ರೀ ಎಚ್. ಬಿ ಕೃಷ್ಣಪ್ಪ.—ಆ ಕಡೆಯ ಪ್ರತಿನಿಧಿಗಳು ಒಬ್ಬಿಬ್ಬರು ಬಂದರೆ ನಾವು ಕರೆದುಕೊಂಡು ಹೋಗುತ್ತೇವೆ, ಖರ್ಚನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು.—ಅದು ಖರ್ಚಿನ ವಿಚಾರವಲ್ಲ

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚೆನ್ನಬಸಪ್ಪನವರು, ಈ ಸಭೆಯ ರಿಪೋರ್ಟು ಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು.

ಅಧ್ಯಕ್ಷರು.—ಇವತ್ತು ರಿಪೋರ್ಟು ಕೊಡುತ್ತೇನೆಂದು ಹೇಳಿದರೆ ಕೋಳಿ ಕೂಗುವುದಕ್ಕೆ ಮುಂಚೆ ಇವತ್ತೇ ರಿಪೋರ್ಟು ಕೊಡುತ್ತೇನೆಂದು ಹೇಳಿದ್ದರೆ ? ನಿನ್ನೆಯ ದಿವಸ ಈ ಕೆಲಸಕ್ಕೋಸ್ಕರ ಒಂದು ಗಂಟೆ ಕಳೆದಿದ್ದೇವೆ, ಹೀಗೆ ಕಾಲ ಕಳೆಯಬೇಕು ಎಂದರೆ ನನ್ನದು ಏನೂ ಅಭ್ಯಂತರವಿಲ್ಲ. ಇವತ್ತು ಒಂದು ಗಂಟೆ ಮುಂಚೆ ಸೇರಿದ್ದೇವೆ

ಶ್ರೀ ಕಾಗೋಡು ತಿಮ್ಮಪ್ಪ:—ಅವರು ಸ್ಥಳದ ವಿದ್ಯಮಾನಗಳನ್ನು ತಿಳಿದು ಕೊಂಡು ಒಂದು ವರದಿಯನ್ನು ಕಳುಹಿಸಿ ಕೊಟ್ಟಿದ್ದರೆ ಇವತ್ತು ನಾವು ಇಷ್ಟೊಂದು ದೀರ್ಘವಾದ ಚರ್ಚೆಯನ್ನು ಮಾಡಬೇಕಾಗಿರಲಿಲ್ಲ. ಅವರು ಸ್ಥಳವನ್ನು ನೋಡಿಕೊಂಡು ಮುಂದಕ್ಕೆ ಹೋಗಿಬಿಟ್ಟರೆ ಹೇಗೆ?

ಶ್ರೀ ಎಚ್. ಟಿ. ಕೃಷ್ಣಪ್ಪ:—ಆ ಕಡೆಯ ಸದಸ್ಯರನ್ನು, ನಮ್ಮ ಸದಸ್ಯರನ್ನು ಅಲ್ಲಗೆ ಕಳುಹಿಸಿ ಕೊಡುತ್ತೇವೆ, ನಾವು ಮತ್ತೆ ಈ ವಿಷಯವನ್ನು ಸಭೆಯಲ್ಲಿ ಎತ್ತಿದರೆ ತಾವು ಆಕ್ಷೇಪ ಮಾಡಕೂಡದು.

ಅಧ್ಯಕ್ಷರು:—ಕಂಡಿಷನ್ ಮಾಡಿ ಕಳುಹಿಸುತ್ತೇವೆ, ತಿರುಗಿ ಈ ಪ್ರಶ್ನೆಯನ್ನು ಎತ್ತುತ್ತೇವೆ ಎಂದರೆ ಹೇಗೆ? ನಾವು ಪ್ರಶ್ನೆಯನ್ನು ಎತ್ತಿದರೆ ನೀವು ಗಲಾಟೆ ಮಾಡಕೂಡದು ಎಂದರೆ ಹೇಗೆ?

ಶ್ರೀ ಹೆಚ್. ಎನ್. ಸಿದ್ದಪ್ಪ : ನಿಮಗೆ ಕಂಡಿಷನ್ ಹಾಕುವ ದೃಷ್ಟಿಯಿಂದ ಹೇಳುವುದಿಲ್ಲ.

ಅಧ್ಯಕ್ಷರು : ಹಾಗಾದರೆ ಸ್ವಲ್ಪ ಸಮಾಧಾನವಾಗಿರಿ. ರೆವಿನ್ಯೂ ಮಂತ್ರಿಗಳು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಇಷ್ಟರಲ್ಲಯೇ ಮಾನ್ಯ ಚನ್ನಬಸಪ್ಪನವರು ಬರಬಹುದು. ಅವರು ಬಂದು ನಿಮಗೆ ಉತ್ತರ ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರ ಟೂರ್ ಪ್ರೋಗ್ರಾಂ ಪ್ರಕಾರ ಅವರು ಸೋಮವಾರ ಬರುತ್ತಾರೆ. ಇವರು ಫೋನ್ ಮುಖಾಂತರ ಕೇಳಿದರೆ ವಿವರವಾಗಿ ತಿಳಿದು ಕೊಳ್ಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಈಗ ಸಭೆಯಲ್ಲಿ ನಾವು ಕೆಲಸ ಮಾಡಬೇಕು ಎಂದು ನಿಮಗೆ ಇಷ್ಟ ಇದೆಯೇ, ಇಲ್ಲವೋ? ನಾವು ಅಸೆಂಬ್ಲಿ ಕರೆದಿರುವುದು, ತಮ್ಮಗಳ ಇರಾದೆಯ ಮೇಲೆ. ತಾವುಗಳು ಸಭೆಯ ಕೆಲಸ ನಡೆಸಬೇಕು ಎಂದು ಇಷ್ಟ ಇದ್ದರೆ, ಸರಿ, ಹಾಗಲ್ಲದೆ ನಾವು ಕೆಲಸ ಮಾಡಬಾರದು, ಕೆಲಸ ನಡೆಸದೆ ಇದ್ದರಲ್ಲಿಯೇ ಕಾಲ ಕಳೆಯಬೇಕು ಎಂದರೆ ನನ್ನದು ಏನೂ ಆಭ್ಯಂತರವಿಲ್ಲ. ಇಲ್ಲಿಯ ಕಾರ್ಯಕಲಾಪಗಳನ್ನು ನಾವಷ್ಟೇ ನೋಡುವುದಿಲ್ಲ ಎಲ್ಲರೂ ನೋಡುತ್ತಿದ್ದಾರೆ ಎನ್ನುವುದು ತಮಗೆ ನಿಗಾ ಇರಲಿ.

ಶ್ರೀ ಎಚ್. ಟಿ. ಕೃಷ್ಣಪ್ಪ ; ಸರ್ಕಾರದ ದೌರ್ಜನ್ಯವನ್ನು ಖಂಡಿಸಿ ನಾವು ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್; ನಾನು ಇದನ್ನು ವಿರೋಧಿಸಿ ಹೊರಗೆ ಹೋಗುತ್ತೇನೆ.

(ಟಿ. ಆರ್. ಶಾಮಣ್ಣ, ಹನುಮೇಗೌಡ ಮತ್ತು ಮಾನ್ಯ ಬಂಗಾರಪ್ಪನವರನ್ನುಳಿದು ಎಲ್ಲಾ ವಿರೋಧ ಪಕ್ಷದ ಸದಸ್ಯರು ಸಭೆಯಿಂದ ಹೊರಗೆ ಹೋದರು)

ಶ್ರೀ ಎಸ್. ಬಂಗಾರಪ್ಪ : ತಮ್ಮ ಆಪ್ಪಣೆ ಪಡೆದು, ನಾನು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ : ಪೋಲೀಸರ ಪಾಶವೀ ಕೃತ್ಯದ ಬಗೆ ಸರ್ಕಾರ ಯಾವ ಸೂಕ್ತ ಕ್ರಮವನ್ನು ತೆಗೆದು ಕೊಳ್ಳದೆ ಇದ್ದುದರಿಂದ ಇದನು ಖಂಡಿಸಿ ನಾನು ಸಭೆಯಿಂದ ಹೊರಗೆ ಹೋಗುತ್ತೇನೆ. (ಈ ಅಧಿಕಾರ ಬಹಳ ದಿವಸ ಉಳಿಯುವುದಿಲ್ಲ ಎಂದು ಹೇಳಿಕೊಂಡು ಸಭೆಯಿಂದ ಹೊರಗೆ ಹೋದರು)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ಅವಗಾಹನೆಗೆ....

ಅಧ್ಯಕ್ಷರು : ನಿಮ್ಮ ವಿಷಯವನ್ನು ನಾಳೆ ತೆಗೆದುಕೊಳ್ಳೋಣ

ಶ್ರೀ ಎಸ್. ಬಂಗಾರಪ್ಪ : ನಾನು ಕೂಡ ಹಾಸವದ ವಿಷಯದ ಬಗ್ಗೆ ಸಭಾತ್ಯಾಗ ಮಾಡುತ್ತೇನೆ.

(ಕೆಲವು ಕಾಂಗ್ರೆಸ್ ಸದಸ್ಯರು ಹೋ ಹೋ ಎಂದು ಕೂಗಿದರು)

SRI S. BANGARAPPA : Madam, I protest against it, tooth and nail.

MADAM SPEAKER.—If the Hon. Member obstructs like this, he will have to face the consequences.

SRI S. BANGARAPPA.—They are obstructing me.

(The member with drew from the House.